# ಹೈಕುಗಳು

ಉದುರಿದ ಎಲೆ
ಭೂಮಿಯನ್ನು ಮುಟ್ಟುವಾಗ
ಬಳಕುವ ನೃತ್ಯಗಾತಿ

★

ತೊಟ್ಟಿಲನ್ನು ತೂಗುವಾಗ
ಕಾಲುಜಾರಿ ಬೀಳುವುದು
ಲಾಲಿ ಹಾಡು.

★

ನಕ್ಷತ್ರಗಳನ್ನು ಎಣಿಸುವಾಗ
ಲೆಕ್ಕ ತಪ್ಪಿಸುತ್ತವೆ
ಮಿಂಚುಹುಳುಗಳು.

★

ಒಣಗಿದ ಟೊಂಗೆಯ ಮೇಲೆ
ಬಂದಾಗಲೇ ಹಚ್ಚಾಗುವುದು
ಬೆಳದಿಂಗಳು.

★

ತಪ್ಪಿಸಿಕೊಳ್ಳುತ್ತದೆ ಕೊಕ್ಕರೆ
ಕಾಲು ಬದಲಾಯಿಸುವಾಗ
ಕೆರೆಯ ಮೀನು.

★





ಮರದ ವಿಸ್ತೀರ್ಣವನ್ನು
ಸ್ಪಷ್ಟವಾಗಿ ತೋರಿಸುವವು
ಉದುರಿದ ಹೂಗಳು.

★

ಅಮ್ಮನ ಸಮಾಧಿಯನ್ನು
ಒಂದು ಸಾರಿ ಸುತ್ತಿ ಬಂದು
ಅಗಲುತ್ತವೆ ತರಗೆಲೆಗಳು.

★

ಮನೆ ತಲುಪುವ ತನಕ
ಸಂಪರ್ಕದಲ್ಲಿ ಇರುತ್ತದೆ
ತುಂತುರು ಆಗಸ.

★

ಧ್ಯಾನ ನಡೆವ ಸಭಾಂಗಣದೊಳಗೆ
ಪ್ರವೇಶಿಸಲು ಪ್ರಯತ್ನಿಸಿ
ಬಾಗಿಲ ಹೊರಗಿದೆ ಹೊಂಬಿಸಿಲು.

★

ಟೊಂಗೆಯನ್ನು ಅಲ್ಲಾಡಿಸಿ
ಹಣ್ಣನ್ನು ತುಂಟ ಹುಡುಗರಿಗೆ
ತೋರುವುದು ಗಾಳಿ

● **ವಿ. ಪುಗಳೇಂದಿ**

ಕಲೆ: ವಾಗೀಶ ಹೆಗಡೆ